ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3085/2023

| | | | |
|---|---|---|---|
| ಹೆಸರು | : | ಶ್ರೀರಂಗ ಜಿ ಆರ್ | ಸಿ .ಡಬ್ಲ್ಯೂ :1 |
| ತಂದೆ ಹೆಸರು | : | ಜಿ ವಿ ರಾಮಚಂದ್ರರಾವ್ | ಪಿ .ಡಬ್ಲ್ಯೂ :1 |
| ವಯಸ್ಸು | : | 44 ವರ್ಷ | |
| ಉದ್ಯೋಗ | : | ಶಿರಸ್ತೇದಾರರು, ಜಿಲ್ಲಾಧಿಕಾರಿಗಳ ಕಚೇರಿ, ತುಮಕೂರು | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ 09-12-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಅಕ್ಟೋಬರ್ 2019 ರಿಂದ 2024 ರವರೆಗೆ ಗುಬ್ಬಿ ತಾಲ್ಲೂಕು ಕಂದಾಯ ಇಲಾಖೆಯಲ್ಲಿ ಹೆಚ್ಚುವರಿ ಶಿರಸ್ತೇದಾರರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

1 ರಿಂದ 4 ನೇ ಆರೋಪಿತರುಗಳು ಗೊತ್ತು . ಗುಬ್ಬಿ ತಾಲ್ಲೂಕಿನ ಅವ್ವೇರಹಳ್ಳಿ ಗ್ರಾಮದ ನರಸಿಂಹಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದೆ . ಸದರಿ ದೇವಸ್ಥಾನದ ಅರ್ಚಕರ ಅಧಿಕಾರ ಬದಲಾವಣೆಯ ವಿಚಾರವಾಗಿ ತುಮಕೂರಿನ ಜಿಲ್ಲಾಧಿಕಾರಿಗಳು ದಿಃ 18-11-2022 ರಂದು ಆದೇಶ ಮಾಡಿದ್ದರು . ದಿಃ21-12-2022 ರಂದು ನಮ್ಮ ತಾಲ್ಲೂಕು ಕಚೇರಿಯಿಂದ ಸದರಿ ದೇವಸ್ಥಾನದ ಅರ್ಚಕರಿಗೆ ನಾವು 12-01-2023 ರಂದು ಸ್ಥಳಕ್ಕೆ ಬಂದು ಅಧಿಕಾರಿ ಹಸ್ತಾಂತರದ ಕ್ರಮ ಕೈಗೊಳ್ಳುತ್ತೇವೆ ಎಂದು ನೋಟಿಸ್ ನೀಡಿದ್ದೆವು . ಆ ಪ್ರಕಾರ ತಹಸೀಲ್ದಾರ್ ರವರು ಈ ಕೆಲಸ ನಿರ್ವಹಿಸುವಂತೆ ನನಗೆ ನಿರ್ದೇಶನ ನೀಡಿದ್ದರು . ಆ ಪ್ರಕಾರ ನಾನು ಮತ್ತು VA ಮತ್ತು RI ರವರು 12-01-2023 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಸದರಿ ದೇವಸ್ಥಾನದ ಬಳಿ ಹೋಗಿದ್ದೆವು . ಆ ಸಮಯ ನರಸಿಂಹಸ್ವಾಮಿ ದೇವಸ್ಥಾನದ ಅರ್ಚಕರಾಗಿದ್ದ 1 ನೇ ಆರೋಪಿತರಾದ ಕೃಷ್ಣಮೂರ್ತಿ ರವರು ಅಲ್ಲಿಗೆ ಬಂದಿರಲಿಲ್ಲ . ನಾವು ಮಧ್ಯಾಹ್ನ 1.00 ಗಂಟೆಯವರೆಗೂ ಅಲ್ಲಿಯೇ ಕಾದಿದ್ದೆವು ಆದರೂ ಸಹಾ ಅವರು ಬರಲಿಲ್ಲ . ನಂತರ ನಾವು ಅದೇ ಗ್ರಾಮದಲ್ಲಿದ್ದ ಅವರ ಮನೆಯ ಬಳಿಗೆ ಹೋದೆವು . 1 ನೇ ಆರೋಪಿತರು ಮನೆಯಲ್ಲಿ ಇಲ್ಲವೆಂದು , ನರಸಿಂಹಸ್ವಾಮಿ ದೇವಸ್ಥಾನದ ಕೀಲಿಕೈ ಬಗ್ಗೆ ನನಗೆ ಮಾಹಿತಿ ಇಲ್ಲವೆಂದು ಅವರ ಪತ್ನಿ ನಮಗೆ ತಿಳಿಸಿದರು . ನಾವು ನರಸಿಂಹಸ್ವಾಮಿ ದೇವಸ್ಥಾನದ ಬಳಿಗೆ ಹಿಂತಿರುಗಿ ಸಾರ್ವಜನಿಕರಿಗೆ ಸದರಿ ವಿಚಾರ ತಿಳಿಸಿದೆವು . ಅಲ್ಲಿಂದ್ದ ಸಾರ್ವಜನಿಕರು ನಾವು ಪೂಜೆ ಸಲ್ಲಿಸಬೇಕು ಬೀಗ ಒಡೆದು ಪೂಜೆ ಮಾಡಲು ಅವಕಾಶ ಮಾಡಿಕೊಡಿ ಎಂದು

ತಿಳಿಸಿದರು . ನಂತರ ನಾನು ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನರಸಿಂಹಸ್ವಾಮಿ ದೇವಸ್ಥಾನದ ಬೀಗವನ್ನು ಒಡೆಸಿ ಅಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಇದ್ದ ಎಲ್ಲಾ ವಸ್ತುಗಳ ಮತ್ತು ದೇವಸ್ಥಾನದ ಪೂಜೆ ಅಧಿಕಾರವನ್ನು ಯೋಗಾನಂದ ಮೂರ್ತಿ ಮತ್ತು ಗೋವಿಂದರಾಜು ರವರಿಗೆ ಹಸ್ತಾಂತರಿಸಿದ್ದೇವೆ ಮತ್ತು ದೇವಸ್ಥಾನಕ್ಕೆ ಹೊಸ ಬೀಗವೊಂದನ್ನು ಕೊಡಿಸಿದ್ದೇವೆ , ಆ ನಂತರ ನಾವು ನಮ್ಮ ಕಚೇರಿಗೆ ಹಿಂತಿರುಗಿದೆವು

ದಿಃ 13-01-2023 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ 1 ನೇ ಆರೋಪಿತರು ತಮ್ಮ ಹಿಂಬಾಲಕರಾದ 2 ರಿಂದ 4 ನೇ ಆರೋಪಿತರೊಡನೆ ನಮ್ಮ ಕಚೇರಿಯ ಬಳಿ ಬಂದಿದ್ದರು . ಅವರು ನಮ್ಮ ಜೊತೆ ಏರು ಧ್ವನಿಯಲ್ಲಿ ಮಾತನಾಡುತ್ತಿದ್ದರು . ನನಗೆ ಈ ಕೂಡಲೇ ಮಹಜರಿನ ಪ್ರತಿ ನೀಡಿ ಎಂದು ಧಮಕಿ ಹಾಕಿದರು . ಕಚೇರಿಯಲ್ಲಿದ್ದ ಚಾಸಾ -2, 4 ರಿಂದ 7 ರವರು ಅಲ್ಲಿಗೆ ಬಂದು ಎಲ್ಲರಿಗೂ ಸಮಾಧಾನ ಮಾಡಿದರು . ಸದರಿ ಗಲಾಟೆಯ ವಿಚಾರವನ್ನು ತಹಸೀಲ್ದಾರ ರವರ ಗಮನಕ್ಕೆ ತಂದಿದ್ದೇನೆ . ಅವರು ಪ್ರಕರಣವನ್ನು ದಾಖಿಸುವಂತೆ ತಿಳಿಸಿದರು . ಆ ಪ್ರಕಾರ ನಾನು ದಿಃ 20-01-2023 ರಂದು ಠಾಣೆಗೆ ದೂರು ನೀಡಿದ್ದೇನೆ .

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

ತುಮಕೂರಿನ ಜಿಲ್ಲಾಧಿಕಾರಿಗಳು ಮಾಡಿದ್ದ ಆದೇಶದ ದೃಢೀಕೃತ ನಕಲನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು .

ತಹಸೀಲ್ದಾರ್ ರವರು ನನಗೆ ಕರ್ತವ್ಯ ವಹಿಸಿ ದಿಃ 11-01-2023 ರಂದು ನೀಡಿದ್ದ ಆದೇಶ ಎಂದು ಸಾಕ್ಷಿಯು ದಾಖಲೆಯೊಂದನ್ನು ಗುರುತಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು .

1 ನೇ ಆರೋಪಿತರಿಗೆ ನೀಡಿದ್ದ ನೋಟಿಸ್ ನ ದೃಢೀಕೃತ ನಕಲು ಎಂದು ಸಾಕ್ಷಿಯು ದಾಖಲೆಯೊಂದನ್ನು ಗುರುತಿಸಿದ್ದು ಅದನ್ನು ನಿಪಿ -4 ಎಂದು ಗುರುತಿಸಲಾಯಿತು .

21-01-2023 ರಂದು ಪೊಲೀಸರು ತಾಲ್ಲೂಕು ಕಚೇರಿಗೆ ಬಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಮಹಜರು ಮಾಡಿದ್ದಾರೆ ನಾನು ಅದಕ್ಕೆ ಸಹಿ ಮಾಡಿದ್ದೇನೆ .

ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -5 ಎಂದು ಸಾಕ್ಷಿ ಸಹಿಯನ್ನು ನಿಪಿ -5 (ಎ) ಎಂದು ಗುರುತಿಸಲಾಯಿತು.

ದಿಃ 21-01-2023 ರಂದು ಪೊಲೀಸ್ ಠಾಣೆಯಲ್ಲಿ ಬೆಳಗ್ಗೆ 10.30 ರ ಸಮಯದಲ್ಲಿ ಮತ್ತೊಂದು ಮಹಜರು ಬರೆಯಲಾಗಿದೆ . ನಾನು ಅದಕ್ಕೆ ಸಹಿ ಮಾಡಿದ್ದೇನೆ .

ಸಾಕ್ಷಿಗೆ ಜಪ್ತು ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -6 ಎಂದು ಸಾಕ್ಷಿ ಸಹಿಯನ್ನು ನಿಪಿ -6 (ಎ) ಎಂದು ಗುರುತಿಸಲಾಯಿತು.

ನಿಪಿ -6 ರಡಿಯಲ್ಲಿ ಪೊಲೀಸರು ನಾವು ದಿಃ 12-01-2023 ಮತ್ತು 13-01-2023 ರಂದು ತಾಲ್ಲೂಕು ಕಚೇರಿಯಲ್ಲಿದ್ದ ಸಿಸಿ ಕ್ಯಾಮರಾದ ಫೂಟೇಜ್‌ನ್ನು ಸಿ ಡಿ ಯ ಮೂಲಕ ಪಡೆದುಕೊಂಡಿದ್ದಾರೆ .

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ .ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1 ರಿಂದ 4 ನೇ ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ .

ಮೇಲಿನ ವಿಚಾರಗಳನ್ನು ತಿಳಿಸಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ . ಆರೋಪಿತರುಗಳು ಕಚೇರಿಗೆ ಬಂದು ಗಲಾಟೆ ಮಾಡಿದ್ದರಿಂದ ನಮ್ಮ ಸರ್ಕಾರಿ ಕೆಲಸಕ್ಕೆ ತೊಂದರೆಯಾಯಿತು .

ಆರೋಪಿತರುಗಳ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.